# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೆಯುಡಬ್ಲ್ಯೂಎಸ್ಎಂಪಿ: ಹುಬ್ಬಳ್ಳಿ-ಧಾರವಾಡ ನಗರಕ್ಕೆ ವಿನ್ಯಾಸ-ನಿರ್ಮಾಣ-ಕಾರ್ಯಾಚರಣೆ ಮತ್ತು ನಿರ್ವಹಣೆ-ವರ್ಗಾವಣೆ (DBOT) ಮಾದರಿಯಲ್ಲಿ ಪರಿಣಾಮಕಾರಿ ವೆಚ್ಚದೊಳಗೆ ನಿರಂತರ (24x7) ಒತ್ತಡ ಸಹಿತ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತೀರಕರಣ ಯೋಜನೆ – ಹಾಲಿ ನಿರ್ವಹಣೆಯಲ್ಲಿ ಇರುವ ನೀರು ಸರಬರಾಜು ವ್ಯವಸ್ಥೆಯನ್ನು ಹಸ್ತಾಂತರಿಸಲು ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರಿ ಆದೇಶ ಸಂ: ಯುಡಿಡಿ/25/ಯುಡಬ್ಲ್ಯೂಎಸ್/2002 ಬೆಂಗಳೂರು, ದಿನಾಂಕ: 24-01-2003
2. ಸರ್ಕಾರಿ ಆದೇಶ ಸಂ: ಯುಡಿಡಿ/81/ಪಿ.ಆರ್.ಜೆ/2008 ಬೆಂಗಳೂರು, ದಿನಾಂಕ: 06.10.2008.
3. ಸರ್ಕಾರಿ ಆದೇಶ ಸಂ: ಯುಡಿಡಿ/244/ಪಿ.ಆರ್.ಜೆ/2013 ಬೆಂಗಳೂರು, ದಿನಾಂಕ: 07-11-2013.
4. ಸರ್ಕಾರಿ ಆದೇಶ ಸಂ: ಯುಡಿಡಿ/279/ಪಿ.ಆರ್.ಜೆ/2018 ಬೆಂಗಳೂರು, ದಿನಾಂಕ: 22.10.2018.
5. ಸರ್ಕಾರಿ ಆದೇಶ ಸಂ: ಯುಡಿಡಿ/96/ಪಿ.ಆರ್.ಜೆ/2020 ಬೆಂಗಳೂರು, ದಿನಾಂಕ: 26.03.2020.
6. ಗುತ್ತಿಗೆ ಕರಾರು ಸಂ: ಐಎನ್-ಕೆಯುಐಡಿಎಫ್‌ಸಿ-104978-ಸಿಡಬ್ಲ್ಯು-ಆರ್‌ಎಫ್‌ಬಿ, ದಿನಾಂಕ: 12.06.2020.
7. ಆಯುಕ್ತರು, ಮಹಾನಗರ ಪಾಲಿಕೆ, ಹುಬ್ಬಳ್ಳಿ-ಧಾರವಾಡ ಇವರ ಪತ್ರ ಸಂ:ಹುಧಾಮಪಾ/ಕೆಯುಡಬ್ಲ್ಯೂಎಸ್ಎಂಪಿ/ಹು-ಧಾ/2020-21/51 ದಿನಾಂಕ: 18-12-2020 ಮತ್ತು ದಿನಾಂಕ:18-01-2021
8. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ ಇವರ ಪತ್ರ ಕೆಯುಐಡಿಎಫ್‌ಸಿ ಪತ್ರ ಸಂ: ಕನಮೂಅಹಸಂ/ ಕನನೀಸಾಯೋ/ 318/ 2020-21/308/ಎ, ದಿನಾಂಕ:13.1.2021.
9. ನಗರಾಭಿವೃದ್ಧಿ ಇಲಾಖೆ ಇವರ ಪತ್ರ ಸಂ. ನಅಇ/274/ ಪಿಆರ್‌ಜೆ/2020, ದಿನಾಂಕ 25.02.2021.
10. ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:17-03-2021 ರಂದು ನಡೆದ ಸಭೆಯ ನಡವಳಿ.
11. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ ಇವರ ಪತ್ರ ಸಂ: ಕನಮೂಅಹಸಂ/ ಕನನೀಸಆಯೋ/318/2020-21/308/A/35, ದಿನಾಂಕ:03-04-2021.

**** <> ****

**ಪ್ರಸ್ತಾವನೆ:-**

ಮೇಲೆ ಓದಲಾದ (1) ರ ಆದೇಶದನ್ವಯ, ಪ್ರಸ್ತುತ ಹುಬ್ಬಳ್ಳಿ-ಧಾರವಾಡ ನಗರದ ನೀರು ಸರಬರಾಜು ವ್ಯವಸ್ಥೆಯನ್ನು ನೀರಿನ ಮೂಲದಿಂದ ಸಂಪರ್ಕ ಕಲ್ಪಿಸಿರುವ ಮನೆಗಳಿಗೆ ಹಾಗೂ ನೀರಿನ ಜಾಲದ ಸಂಪರ್ಕವಿಲ್ಲದ ಪ್ರದೇಶಗಳಿಗೆ ಕೊಳವೆಬಾವಿ ಮತ್ತು ಟ್ಯಾಂಕರ್ ಗಳ ಮೂಲಕ ನೀರು ಸರಬರಾಜು, ನಿರ್ವಹಣೆ, ದುರಸ್ತಿ, ತುರ್ತು ಕೆಲಸಗಳು, ನೀರಿನ ಬಿಲ್ ನೀಡುವ ಹಾಗೂ ಕರ ವಸೂಲಿ ಸೇರಿದಂತೆ ಕ.ನ.ನೀ.ಸ & ಒ.ಚ ಮಂಡಳಿಯಿಂದ ದಿನಾಂಕ: 01.04.2003 ರಿಂದ ನಿರ್ವಹಣೆ ಮಾಡಲಾಗುತ್ತಿದೆ.

ಮೇಲೆ ಓದಲಾದ (2) ರ ಆದೇಶದನ್ವಯ ಹುಬ್ಬಳ್ಳಿ-ಧಾರವಾಡ, ಬೆಳಗಾಂ ಮತ್ತು ಗುಲ್ಬರ್ಗಾ ನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿ 24X7 ನಿರಂತರ ನೀರು ಸರಬರಾಜನ್ನು ಉನ್ನತೀಕರಿಸಲು ಹಾಗೂ ಸದರಿ ಯೋಜನೆಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (PPP) ಆಧಾರದ ಮೇಲೆ ಸವಿಸ್ತಾರ ಯೋಜನಾ ವರದಿ ತಯಾರಿಸಲು ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ (3) ರ ಆದೇಶದನ್ವಯ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಿರಂತರ (24x7) ಒತ್ತಡ ಸಹಿತ ನೀರು ಸರಬರಾಜು ಸೇವೆಯ ಪ್ರಾತ್ಯಕ್ಷಿಕ ವಲಯಗಳ ಯಶಸ್ವಿನಿಂದಾಗಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ ಉಳಿದ ಎಲ್ಲಾ ಪ್ರದೇಶಗಳಿಗೂ ವಿಸ್ತರಿಸಲು ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಓದಲಾದ (4) ರ ಆದೇಶದನ್ವಯ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ಯೋಜನೆಗೆ ಒತ್ತಡ ಸಹಿತ ನಿರಂತರ 24/7 ನೀರು ಸರಬರಾಜು ಯೋಜೆಯನ್ನು ಕೈಗೊಳ್ಳಲು ಈ ಹಿಂದೆ ಹೊರಡಿಸಲಾದ ಆದೇಶ ಸಂಖ್ಯೆ: UDD 244 PRJ 2013, ದಿ:07-11-2013ನ್ನು ಪರಿಷ್ಕರಿಸಿ Design-Built-Operate-Transfer (DBOT) ಮಾದರಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಮಂಜೂರಾತಿ ನೀಡಲಾಗಿರುತ್ತದೆ.

ಮೇಲೆ ಓದಲಾದ (5) ರ ಆದೇಶದನ್ವಯ ವಿಶ್ವ ಬ್ಯಾಂಕ್ ನೆರವಿನ KUWSMP ಯೋಜನೆಯಡಿಯಲ್ಲಿ, ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ಮಹಾನಗರ ಪಾಲಿಕೆಗಳ ಸಾರ್ವಜನಿಕರಿಗೆ 24X7 ನಿರಂತರ ನೀರು ಸರಬರಾಜನ್ನು ಪೂರೈಸುವ ಯೋಜನೆಯ 19ನೇ ಅಧಿಕಾರಯುಕ್ತ ಸಮಿತಿ ದಿನಾಂಕ:07-03-2020 ರಂದು ನೀಡಿರುವ ತೀರ್ಮಾನದಂತೆ ವಿನ್ಯಾಸ ನಿರ್ಮಾಣ ಕಾರ್ಯಾಚರಣೆ ನಿರ್ವಹಣೆ ಮತ್ತು ಹಸ್ತಾಂತರಿಸುವ (DBOT) ಮಾದರಿಯಲ್ಲಿ ಕಾಮಗಾರಿಗಳನ್ನು ಮೆ|| ಎಲ್ & ಟಿ ಲಿ., ಚೆನ್ನೈ ರವರಿಗೆ ಗುತ್ತಿಗೆಯನ್ನು ನೀಡಲು ಅನುಮೋದನೆ ನೀಡಲಾಗಿರುತ್ತದೆ.

ಮುಂದುವರೆದು, ಮೇಲೆ ಓದಲಾದ (5) ರಲ್ಲಿನ ಸರ್ಕಾರದ ಆದೇಶದನ್ವಯ ಮೇಲೆ ಓದಲಾದ (6) ರ ಕರಾರು ಒಪ್ಪಂದದಂತೆ ಗುತ್ತಿಗೆ ಮೆ|| ಎಲ್&ಟಿ ಲಿ., ಚೆನ್ನೈ (ಆಪರೇಟರ್) ಇವರಿಗೆ ಗುತ್ತಿಗೆಯನ್ನು ನೀಡಲಾಗಿರುತ್ತದೆ. ಸದರಿ ಕರಾರನಿನ್ವಯ ಹುಬ್ಬಳ್ಳಿ-ಧಾರವಾಡ, ನಗರದಲ್ಲಿ ಹಾಲಿ ಇರುವ ಸಂಪೂರ್ಣ ನೀರು ಸರಬರಾಜು ವ್ಯವಸ್ಥೆಯನ್ನು ನಿಗಧಿಪಡಿಸಿದ ಪರಿಣಾಮಕಾರಿ ದಿನಾಂಕ: 12.06.2020 ರಿಂದ 181 ದಿನದಿಂದ ಕಾಲಾವಧಿ ವಿಸ್ತರಣೆ 92 ದಿನ ಸೇರಿ ಅಂದರೆ ದಿನಾಂಕ: 12.03.2021 ರಿಂದ ಹಸ್ತಾಂತರಿಸಿಕೊಂಡು ಹಾಲಿ ನೀರು ಸರಬರಾಜು ಕಾರ್ಯ ನಿರ್ವಹಿಸುತ್ತಿರುವ ಪಾಲಿಕೆಯ ಕೌಶಲ್ಯ ಮತ್ತು ಕೌಶಲ್ಯ ರಹಿತ ಮಾನವ ಸಂಪನ್ಮೂಲ ಕನಿಷ್ಟ 2 ವರ್ಷಗಳ ಅವಧಿಗೆ ಬಳಸಿಕೊಂಡು ನೀರು ಸರಬರಾಜು ವ್ಯವಸ್ಥೆಯನ್ನು ನಿರ್ವಹಿಸಬೇಕಾಗಿರುತ್ತದೆ.

ಮೇಲೆ ಓದಲಾದ (7) ರ ಪತ್ರದಲ್ಲಿ, ಆಯುಕ್ತರು, ಹುಬ್ಬಳ್ಳಿ-ಧಾರವಾಡ, ಮಹಾನಗರ ಪಾಲಿಕೆ ಹಾಗೂ ಮೇಲೆ ಓದಲಾದ (8) ರ ಪತ್ರದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ ಇವರುಗಳು ಹಾಲಿ ನೀರು ಸರಬರಾಜು ವ್ಯವಸ್ಥೆಯನ್ನು ಕೆಯುಡಬ್ಲ್ಯೂಎಸ್&ಡಿಬಿ ಯಿಂದ ಮಹಾನಗರ ಪಾಲಿಕೆಯ ಮುಖಾಂತರ ಮೆ|| ಎಲ್ & ಟಿ ಲಿ., ಚೆನ್ನೈ ರವರಿಗೆ ಹಸ್ತಾಂತರಿಸುವ ಕುರಿತಾಗಿ ಸೂಕ್ತ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಅದರನ್ವಯ ಮೇಲೆ ಓದಲಾದ (9) ರ ಪತ್ರದಲ್ಲಿ KUWS&DB ಮಂಡಳಿಯಿಂದ ವಾಪಸ್ಸು ಪಡೆದು, ಗುತ್ತಿಗೆದಾರರಾದ ಮೆ.ಎಲ್.&ಟಿ ಲಿ ರವರಿಗೆ ಹಸ್ತಾಂತರಿಸುವುದಕ್ಕೆ ಸರ್ಕಾರದಿಂದ ಅನುಮೋದನೆ ನೀಡಿ ಪತ್ರ ಹೊರಡಿಸಲಾಗಿರುತ್ತದೆ.

ಆದರೆ, ಮೇಲೆ ಓದಲಾದ (10) ರನ್ವಯ ಅಪರ ಮುಖ್ಯ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ದಿನಾಂಕ:17-03-2021 ರಂದು ನಡೆದ ಸಭೆಯಲ್ಲಿ ಹಾಲಿ ಇರುವ ಹುಬ್ಬಳ್ಳಿ-ಧಾರವಾಡ ಕುಡಿಯುವ ನೀರಿನ ನಿರ್ವಹಣೆಯನ್ನು M/s. L&T, Chennai ಇವರಿಗೆ KUWS&DB ವತಿಯಿಂದ ದಿನಾಂಕ:20-04-2021 ರಂದು ಹಸ್ತಾಂತರಿಸಲು ತೀರ್ಮಾನಿಸಲಾಗಿದೆ.

ಅದರಂತೆ, ಮೇಲೆ ಓದಲಾದ (11) ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ ರವರು ದಿನಾಂಕ:13-01-2021 ರಂದು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಷ್ಕರಿಸಿ, ದಿನಾಂಕ:03-04-2021 ರ ಪತ್ರದಲ್ಲಿ, ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆಯನ್ನು ದಿನಾಂಕ: 20.04.2021 ರಿಂದ ಕೆಯುಡಬ್ಲ್ಯೂಎಸ್&ಡಿಬಿ ವತಿಯಿಂದ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮುಖಾಂತರ ಹಾಲಿ ಇರುವ ಸಮಗ್ರ ನೀರು ಸರಬರಾಜು ವ್ಯವಸ್ಥೆಯ ನಿರ್ವಹಣೆಯನ್ನು ಪ್ರಾತ್ಯಕ್ಷಿಕ ವಲಯಗಳೊಂದಿಗೆ ಗುತ್ತಿಗೆದಾರರಾದ ಮೆ|| ಎಲ್&ಟಿ ಲಿ., ಚೆನ್ನೈ (ಆಪರೇಟರ್) ಇವರಿಗೆ ನಿರ್ವಹಣೆ ಮಾಡುವ ಸಲುವಾಗಿ ಅನುಬಂಧ-1 ರಲ್ಲಿ ನೀಡಿರುವ ಅಂಶಗಳಿಗೆ ಅನುಮೋದನೆ ನೀಡಿ ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ ಹಾಗೂ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ರವರುಗಳ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ನಅಇ 274 ಪಿ.ಆರ್.ಜೆ 2020,</u>**
**<u>ಬೆಂಗಳೂರು, ದಿನಾಂಕ:-15-04-2021.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಾಲಿ ಇರುವ ಹುಬ್ಬಳ್ಳಿ-ಧಾರವಾಡ ಕುಡಿಯುವ ನೀರಿನ ನಿರ್ವಹಣೆಯನ್ನು ದಿನಾಂಕ:20.04.2021 ರಿಂದ ಕೆಯುಡಬ್ಲ್ಯೂಎಸ್&ಡಿಬಿ ವತಿಯಿಂದ ಹುಬ್ಬಳ್ಳಿ-ಧಾರವಾಡ, ಮಹಾನಗರ ಪಾಲಿಕೆಯ ಮುಖಾಂತರ ಸಮಗ್ರ ನೀರು ಸರಬರಾಜು ವ್ಯವಸ್ಥೆಯ ಪ್ರಾತ್ಯಕ್ಷಿಕ ವಲಯಗಳೊಂದಿಗೆ ಗುತ್ತಿಗೆದಾರರಾದ ಮೆ|| ಎಲ್&ಟಿ ಲಿ., ಚೆನ್ನೈ (ಆಪರೇಟರ್) ಇವರಿಗೆ ಹಸ್ತಾಂತರಿಸುವ ಸಲುವಾಗಿ ಸರ್ಕಾರವು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ:

1. ಕೆಯುಡಬ್ಲ್ಯೂಎಸ್&ಡಿಬಿ ಇವರು ನೀರು ಸರಬರಾಜು ವ್ಯವಸ್ಥೆಯಲ್ಲಿ ನೀರಿನ ಮೂಲದಿಂದ ಮನೆಗಳಿಗೆ ಸಂಪರ್ಕ ಕಲ್ಪಿಸಿರುವ ನಳಗಳವರೆಗೆ ಹಾಗೂ ನೀರಿನ ಜಾಲದ ಸಂಪರ್ಕವಿಲ್ಲದ ಪ್ರದೇಶಗಳಿಗೆ ಕೊಳವೆ ಬಾವಿ ಮತ್ತು ಟ್ಯಾಂಕರ್ ಗಳ ಮೂಲಕ ನೀರು ಸರಬರಾಜು ನಿರ್ವಹಣೆಗೆ ಅವಶ್ಯಕವಿರುವ ಎಲ್ಲಾ ಭೌತಿಕ ಚರಾ-ಸ್ಥಿರ ಆಸ್ತಿಗಳನ್ನು, ದಾಖಲೆಗಳನ್ನು, ನಿರ್ವಹಣೆ, ರಿಪೇರಿ, ಬಿಲ್ಲುಗಳು, ಪಾವತಿಗಳು, ವಿತರಣಾ ನಕ್ಷೆಗಳು, ಕೈಪಿಡಿಗಳು, ಕಡತಗಳು, ರಿಜಿಸ್ಟರ್‌ಗಳು, ಸ್ಟಾಕ್-ರಿಜಿಸ್ಟಾರ್ ಮತ್ತು ಇತರೆ ಯಾವುದೇ ಲಭ್ಯವಿರುವ ಸಾಮಾಗ್ರಿಗಳು ಹಾಗೂ ದಾಖಲೆಗಳನ್ನು ಕೆಯುಡಬ್ಲ್ಯೂಎಸ್&ಡಿಬಿ ವತಿಯಿಂದ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮುಖಾಂತರ ಮೆ|| ಎಲ್&ಟಿ ಲಿ., ಚೆನ್ನೈ ಇವರಿಗೆ ಮುಂದಿನ 11.5 ವರ್ಷಗಳ ನಿರ್ವಹಣೆ ಹಾಗೂ ಕಾರ್ಯಾಚರಣೆ ಸಲುವಾಗಿ ಹಸ್ತಾಂತರಿಸತಕ್ಕದ್ದು.

2. ಹುಬ್ಬಳ್ಳಿ-ಧಾರವಾಡ ಪಾಲಿಕೆಯು ಮೆ|| ಎಲ್&ಟಿ ಲಿ., ಚೆನ್ನೈ ಇವರಿಗೆ ಹಾಲಿ ಇರುವ ಸಮಗ್ರ ನೀರು ಸರಬರಾಜು ವ್ಯವಸ್ಥೆಯ ನಿರ್ವಹಣೆ ಹಾಗೂ ಕಾರ್ಯಾಚರಣೆ ಮಾಡಲು ಗುತ್ತಿಗೆಯ ನಿಯಮಾನುಸಾರ ಮಹಾನಗರ ಪಾಲಿಕೆ ದರಗಳ ತೀರ್ಮಾನಗಳಂತೆ ನೀರು ಸರಬರಾಜು ಬಿಲ್ಲುಗಳನ್ನು ತಯಾರಿಸಿ ವಿತರಿಸಲು ಹಾಗೂ ಬಿಲ್ಲಿನ ಮೊತ್ತವನ್ನು ವಸೂಲು ಮಾಡಿ ಒ&ಎಂ ಎಸ್ಕ್ರೋ ಖಾತೆಗೆ ಜಮೆ ಮಾಡಲು ಅನುಮತಿ ನೀಡತಕ್ಕದ್ದು.

3. ಹುಬ್ಬಳ್ಳಿ-ಧಾರವಾಡ ಪಾಲಿಕೆಯಲ್ಲಿ ಸದರಿ ಯೋಜನೆಯಡಿಯಲ್ಲಿ ನೀರು ಸರಬರಾಜು ವ್ಯವಸ್ಥೆಯ ಉಸ್ತುವಾರಿ ಸಲುವಾಗಿ ವಿಶೇಷ ಉದ್ದೇಶಿತ ವಾಹನವನ್ನು SPV (Special Purpose Vehicle) ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಪೂರ್ಣ ಪ್ರಮಾಣದ SPV ಅಸ್ತಿತ್ವಕ್ಕೆ ಬರುವವರೆಗೆ ತಾತ್ಕಾಲಿಕವಾಗಿ ಈ ಕೆಳಕಂಡ ಸಮಿತಿಯನ್ನು ರಚಿಸಿದೆ:

| | | |
|---|---|---|
| (ಅ) | ಆಯುಕ್ತರು, ಮಹಾನಗರ ಪಾಲಿಕೆ, ಹುಬ್ಬಳ್ಳಿ-ಧಾರವಾಡ | ಅಧ್ಯಕ್ಷರು |
| (ಆ) | ಮುಖ್ಯ ಅಭಿಯಂತರರು, ಕ.ನ.ನೀ.ಸ&ಒ.ಚ ಮಂಡಳಿ, ಧಾರವಾಡ | ಸದಸ್ಯರು |

| | | |
|---|---|---|
| (ಇ) | ಉಪ ಆಯುಕ್ತರು (ಆಡಳಿತ) /ಪರಿವರ್ತನಾ ಸಂಯೋಜಕರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ (ಕೆ.ಯು.ಡಬ್ಲ್ಯೂ.ಎಸ್.ಎಂ.ಪಿ), ಹುಬ್ಬಳ್ಳಿ-ಧಾರವಾಡ | ಸದಸ್ಯ ಕಾರ್ಯದರ್ಶಿ |
| (ಈ) | ಉಪ ಪೊಲೀಸ್ ಆಯುಕ್ತರು, ಸಂಚಾರ ಮತ್ತು ಅಪರಾಧ, ಹುಬ್ಬಳ್ಳಿ-ಧಾರವಾಡ | ಸದಸ್ಯರು |
| (ಉ) | ಅಧೀಕ್ಷಕ ಅಭಿಯಂತರರು, ಪಿ.ಐ.ಯು, ಕೆ.ಯು.ಡಬ್ಲ್ಯೂ.ಎಸ್.ಎಂ.ಪಿ, ಹುಬ್ಬಳ್ಳಿ-ಧಾರವಾಡ | ಸದಸ್ಯರು |
| (ಊ) | ಕಾರ್ಯಪಾಲಕ ಅಭಿಯಂತರರು, ಕ.ನ.ನೀ.ಸ&ಒ.ಚ ಮಂಡಳಿ, ನಿರ್ವಹಣಾ ವಿಭಾಗ, ಹುಬ್ಬಳ್ಳಿ | ಸದಸ್ಯರು |
| (ಋ) | ಕಾರ್ಯಪಾಲಕ ಅಭಿಯಂತರರು, ಕ.ನ.ನೀ.ಸ&ಒ.ಚ ಮಂಡಳಿ, ನಿರ್ವಹಣಾ ವಿಭಾಗ, ಧಾರವಾಡ | ಸದಸ್ಯರು |
| (ಎ) | ಕಾರ್ಯಪಾಲಕ ಅಭಿಯಂತರರು, ಪಿ.ಐ.ಯು, ಕೆ.ಯು.ಡಬ್ಲ್ಯೂ.ಎಸ್.ಎಂ.ಪಿ, ಹುಬ್ಬಳ್ಳಿ-ಧಾರವಾಡ | ಸದಸ್ಯರು |

4. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಕಾಲಕಾಲಕ್ಕೆ ಸರ್ಕಾರಿ ಆದೇಶಗಳಿಗನುಸಾರ ನೀರಿನ ದರಗಳನ್ನು ಪರಿಷ್ಕರಿಸತಕ್ಕದ್ದು.

5. ನೀರು ಸರಬರಾಜು ವ್ಯವಸ್ಥೆಯನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸಿದ ನಂತರ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕ.ನ.ನೀ.ಸ&ಒ.ಚ ಮಂಡಳಿಯ ತಾಂತ್ರಿಕ ಸಿಬ್ಬಂದಿಗಳನ್ನು ಬೇಸಿಗೆ ಕಾಲದಲ್ಲಿ ಗುತ್ತಿಗೆದಾರರು ಸುಗಮವಾಗಿ ನಿರ್ವಹಿಸಲು ಅನುವಾಗುವಂತೆ ಅವರ ಸೇವೆಗಳನ್ನು ಮಾರ್ಗದರ್ಶನ ಹಾಗೂ ಸಮನ್ವಯ ಸಲುವಾಗಿ 6 ತಿಂಗಳು ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಸೇವೆಗಳನ್ನು ಮುಂದುವರೆಸತಕ್ಕದ್ದು.

6. ನೀರು ಸರಬರಾಜು ವ್ಯವಸ್ಥೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕೌಶಲ್ಯ ಮತ್ತು ಕೌಶಲ್ಯ ರಹಿತ (Skilled and Unskilled) ಮಹಾನಗರ ಪಾಲಿಕೆಯ ಅಥವಾ ಹೊರ ಗುತ್ತಿಗೆಯ (Corporation's Own or Outsource) ಸಿಬ್ಬಂದಿಗಳ ಸೇವೆಯನ್ನು ಬಳಸಿಕೊಂಡು ಮೆ|| ಎಲ್&ಟಿ ಲಿ., ಚೆನ್ನೈ ಇವರು ಮೊದಲ 02 ವರ್ಷಗಳ ಅವಧಿಗೆ ನೀರು ಸರಬರಾಜು ಕಾರ್ಯವನ್ನು ಗುಣಾತ್ಮಕವಾಗಿ ನಿರ್ವಹಿಸುವುದು. ಸದರಿ ಸಿಬ್ಬಂದಿಗಳ 2 ವರ್ಷಗಳ ಅವಧಿಯ ವೇತನ ಮತ್ತು ಭತ್ಯೆಗಳು ಹಾಗೂ ಇಎಸ್ಐ, ಪಿಎಫ್ ಮತ್ತುನಿವೃತ್ತಿ ವೇತನ ಶುಲ್ಕ ಹಾಗೂ ಇತರೆ ಕಡಿತಗಳನ್ನು ಸಂಬಂಧಪಟ್ಟ ಇಲಾಖೆಗಳ ವೆಚ್ಚವನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಮೆ|| ಎಲ್&ಟಿ ಲಿ., ಚೆನ್ನೈ ಇವರಿಗೆ ಮರು ಪಾವತಿಸತಕ್ಕದ್ದು.

7. 2 ವರ್ಷಗಳ ನಂತರ ಕೌಶಲ್ಯ ಮತ್ತು ಕೌಶಲ್ಯ ರಹಿತ ಸಿಬ್ಬಂದಿಗಳನ್ನು ಸಂದರ್ಶನದ ಮುಖಾಂತರ ಮೆ|| ಎಲ್&ಟಿ ಲಿ., ಚೆನ್ನೈ ಇವರು ಪರಸ್ಪರ ಒಪ್ಪಿಗೆ ಮೇರೆಗೆ ಸಿಬ್ಬಂದಿಯನ್ನು ನೇಮಿಸಿಕೊಳ್ಳಬಹುದು ಹಾಗೂ ಒಪ್ಪಿಗೆ ಇಲ್ಲದ ಸಿಬ್ಬಂದಿಗಳನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಲಭ್ಯವಿರುವ ಹುದ್ದೆಗಳಿಗೆ ವರ್ಗಾಯಿಸತಕ್ಕದ್ದು.

8. ನೀರು ಸರಬರಾಜು ವ್ಯವಸ್ಥೆಯ ನಿರ್ವಹಣೆಯನ್ನು ಮೆ|| ಎಲ್&ಟಿ ಲಿ., ಚೆನ್ನೈ ಇವರಿಗೆ ಹಸ್ತಾಂತರಿಸಿದ ದಿನಾಂಕದ ಹಿಂದಿನ ನೀರಿನ ಬಾಕಿ ಕರಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ, ಮಹಾನಗರ ಪಾಲಿಕೆಯ ತೀರ್ಮಾನಗಳಂತೆ ವಸೂಲಾತಿ ಮಾಡತಕ್ಕದ್ದು.

9. ನೀರಸಾಗರ ಜಲಾಶಯಕ್ಕೆ ಸಂಬಂಧಿಸಿದ ದುರಸ್ತಿ ಮತ್ತು ನಿರ್ವಹಣೆಯನ್ನು ಮಾತ್ರ ಕ.ನ.ನೀ.ಸ&ಒ.ಚ ಮಂಡಳಿಯಿಂದ ನಿರ್ವಹಿಸುವುದು. ಸದರಿ ದುರಸ್ತಿ ಮತ್ತು ನಿರ್ವಹಣೆಗೆ ಸಂಬಂಧಿಸಿದ ಮೊತ್ತವನ್ನು ಮಹಾನಗರ ಪಾಲಿಕೆ ವತಿಯಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಲಿತಾಬಾಯಿ.ಕೆ).
ಸರ್ಕಾರದ ಅಧೀನ ಕಾರ್ಯದರ್ಶಿ (ಪಿ.ಎಂ.ಸಿ)
ನಗರಾಭಿವೃದ್ಧಿ ಇಲಾಖೆ

**ಇವರಿಗೆ,**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು (ವೆಚ್ಚ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ (ವಿತ್ತೀಯ ಸುಧಾರಣೆ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಡಬ್ಲ್ಯೂ.ಎಸ್.& ಡಿ.ಬಿ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ, ಬೆಂಗಳೂರು.
8. ಆಯುಕ್ತರು, ಮಹಾನಗರ ಪಾಲಿಕೆ, ಹುಬ್ಬಳ್ಳಿ-ಧಾರವಾಡ.
9. ಉಪ ಕಾರ್ಯದರ್ಶಿಗಳು-4, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ.
10. ನಗರಾಭಿವೃದ್ಧಿ ಇಲಾಖೆಯ ವೆಬ್ ಸೈಟ್ /ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ**

ಸರ್ಕಾರದ ಮುಖ್ಯ ಕಾರ್ಯದರ್ಶಿಗಳ, ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.